ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 441 (425)

2) ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

3) ಉತ್ತರಿಸುವ ದಿನಾಂಕ : 09.03.2020.

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಚಿರತೆ ಮತ್ತು ಹುಲಿ ಪ್ರತ್ಯಕ್ಷವಾದ ಪ್ರಕರಣಗಳು ದಾಖಲಾಗಿವೆ; (ವಿವರ ನೀಡುವುದು)	ರಾಜ್ಯದಲ್ಲಿ ಚಾಮರಾಜನಗರ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳ ಅರಣ್ಯದಂಚಿನ ಗ್ರಾಮಗಳಲ್ಲಿ ಹುಲಿಗಳು ಕಂಡುಬರುತ್ತಿದ್ದು, ರಾಮನಗರ, ಕೋಲಾರ, ಬಳ್ಳಾರಿ, ಚಿತ್ರದುರ್ಗ, ಹಾವೇರಿ, ಹಾಸನ, ದಕ್ಷಿಣ ಕನ್ನಡ, ತುಮಕೂರು, ಮಂಡ್ಯ, ಮೈಸೂರು, ಶಿವಮೊಗ್ಗ ಜಿಲ್ಲೆಗಳ ಗ್ರಾಮಗಳಲ್ಲಿ ಚಿರತೆಗಳು ಕಂಡುಬರುತ್ತಿದ್ದು, ಈ ಕುರಿತು ಅಂಕಿ-ಅಂಶಗಳು ದಾಖಲಾಗಿರುವುದಿಲ್ಲ.
ಆ)	ಚಿರತೆ ಮತ್ತು ಹುಲಿಗಳು ಮಾನವನ ಮೇಲೆ ದಾಳಿ ಮಾಡಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)	ಹುಲಿ ಮತ್ತು ಚಿರತೆ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣ ಹಾಗೂ ಮಾನವ ಗಾಯ ಪ್ರಕರಣಗಳ ಕುರಿತು ಜಿಲ್ಲಾವಾರು / ವಿಭಾಗವಾರು ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ	ಜಿಲ್ಲೆ / ವಿಭಾಗ	2018-19		2019-20	
		ಮಾನವ ಗಾಯ	ಮಾನವ ಪ್ರಾಣ ಹಾನಿ	ಮಾನವ ಗಾಯ (31.01.2020 ರವರೆಗೆ)	ಮಾನವ ಪ್ರಾಣ ಹಾನಿ (29.02.2020 ರವರೆಗೆ)
1.	ರಾಮನಗರ	14	-	5	-
2.	ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ	2	-	-	-
3.	ಕೋಲಾರ	2	-	1	-
4.	ಬೆಳಗಾವಿ	5	-	5	-
5.	ಬಾಗಲಕೋಟೆ	1	-	-	-
6.	ಬಿಜಾಪುರ	2	-	1	-
7.	ಗೋಕಾಕ್	7	-	-	-
8.	ಬಳ್ಳಾರಿ	3	3	3	-
9.	ಚಿತ್ರದುರ್ಗ	10	-	1	-
10.	ದಾವಣಗೆರೆ	5	-	-	-
11.	ಕೊಪ್ಪಳ	2	-	-	-
12.	ಬಿ.ಆರ್.ಟಿ	5	-	4	-
13.	ಕಾವೇರಿ	7	-	2	-
14.	ಮಲೈ ಮಹದೇಶ್ವರ	2	-	3	-
15.	ಚಿಕ್ಕಮಗಳೂರು	8	-	2	-
16.	ಭದ್ರಾ	1	-	-	-

17.	ಕೊಪ್ಪ	1	-	3	-
18.	ಗದಗ	21	-	-	-
19.	ಹಾವೇರಿ	1	-	2	-
20.	ಬಂಡೀಪುರ	9	-	15	2
21.	ನಾಗರಹೊಳೆ	21	3	7	-
22.	ಬೀದರ್	1	-	-	-
23.	ಕಲಬುರಗಿ	11	-	-	-
24.	ಯಾದಗಿರಿ	2	-	-	-
25.	ದಾಂಡೇಲಿ	1	-	-	-
26.	ಹಳಿಯಾಳ	1	-	2	-
27.	ಹೊನ್ನವಾರ	2	-	-	-
28.	ಯಲ್ಲಾಪುರ	8	-	1	-
29.	ಹಾಸನ	7	-	4	-
30.	ತುಮಕೂರು	24	-	19	4
31.	ಮಡಿಕೇರಿ	4	-	2	-
32.	ವಿರಾಜಪೇಟೆ	8	-	5	-
33.	ಮಡಿಕೇರಿ ವನ್ಯಜೀವಿ	3	-	-	-
34.	ಕುಂದಾಪುರ	4	-	6	-
35.	ಮಂಗಳೂರು	1	-	1	-
36.	ಮಂಡ್ಯ	5	-	1	-
37.	ಹುಣಸೂರು	7	-	-	-
38.	ಮೈಸೂರು	9	-	7	-
39.	ಭದ್ರಾವತಿ	7	-	1	-
40.	ಸಾಗರ	1	-	-	-
41.	ಶಿವಮೊಗ್ಗ	2	-	-	-
	ಒಟ್ಟು	237	6	103	6

ಇ)	ಇತ್ತೀಚಿನ ದಿನಗಳಲ್ಲಿ ಈ ರೀತಿ ವನ್ಯಜೀವಿಗಳು ಮಾನವನ ಮೇಲೆ ದಾಳಿ ಮಾಡಲು ಮತ್ತು ಮಾನವನ ವಾಸಸ್ಥಳಗಳಲ್ಲಿ ಕಾಣಿಸಿಕೊಳ್ಳಲು ಕಾರಣಗಳೇನು;	ಮಾನವ ಜನಸಂಖ್ಯೆಯ ಹೆಚ್ಚಳದಿಂದಾಗಿ ಅರಣ್ಯ ಪ್ರದೇಶಗಳು ಹೆಚ್ಚು ಜೈವಿಕ ಒತ್ತಡಗಳಿಗೆ ಒಳಗಾಗುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಅಸಮರ್ಪಕ ಮಳೆಯಿಂದಾಗಿ ವನ್ಯಪ್ರಾಣಿ ಆವಾಸ ಸ್ಥಾನಗಳಲ್ಲಿ ಮೇವು ಮತ್ತು ನೀರಿನ ಕೊರತೆಯಿಂದಾಗಿ ಆಹಾರವನ್ನು ಅರಸಿಕೊಂಡು ವನ್ಯಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ಬರುತ್ತಿರುತ್ತದೆ. ಅಲ್ಲದೇ ಅರಣ್ಯದಂಚಿನ ಗ್ರಾಮಗಳಲ್ಲಿ ಆಕರ್ಷಕ ಬೆಳೆಗಳಾದ ಭತ್ತ, ಕಬ್ಬು, ಬಾಳೆ, ರಾಗಿ ಇತ್ಯಾದಿಗಳನ್ನು ಬೆಳೆಯುತ್ತಿರುವುದರಿಂದ ಆನೆಗಳು ಆಕರ್ಷಿತವಾಗಿ ಜನವಸತಿ ಪ್ರದೇಶಗಳಿಗೆ ಬರುತ್ತಿರುತ್ತದೆ.

ಈ)	ಈ ರೀತಿಯ ಪ್ರಕರಣಗಳನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ವನ್ಯಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸಲು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. • ಸೌರಶಕ್ತಿ ಬೇಲಿ ನಿರ್ಮಾಣ/ ನಿರ್ವಹಣೆ. • ಆನೆ ತಡೆ ಕಂದಕ ನಿರ್ಮಾಣ/ನಿರ್ವಹಣೆ. • ವನ್ಯಪ್ರಾಣಿಗಳಿಗೆ ಕುಡಿಯುವ ನೀರಿಗಾಗಿ ಕೆರೆಗಳ ನಿರ್ಮಾಣ/ನಿರ್ವಹಣೆ. • ಬೇಟೆ ತಡೆ ಶಿಬಿರ ಹಾಗೂ ಕ್ಷಿಪ್ರ ಸ್ಪಂದನ ಪಡೆ (Rapid Response Teams) ತಂಡಗಳಿಗೆ ನಿಸ್ತಂತು ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ. • ವನ್ಯಪ್ರಾಣಿಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಉಪಯೋಗಿತ ರೈಲ್ವೆ ಹಳಿಗಳನ್ನು ಬಳಸಿಕೊಂಡು ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. • ವನ್ಯಪ್ರಾಣಿಗಳ ಚಲನ-ವಲನದ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ. • ಕಾಡಾನೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಆನೆ ಗುಂಪುಗಳ ಒಂದೊಂದು ಗುಂಪಿನ ಒಂದು ವಯಸ್ಕ ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಸಿ, 24 ಗಂಟೆ ಆನೆ ಹಿಂದಿನ ಚಲನ-ವಲನಗಳ ಮೇಲೆ ನಿಗಾ ವಹಿಸಿ, ಸದರಿ ಆನೆಗಳು ಯಾವ ಯಾವ ಪ್ರದೇಶಗಳಲ್ಲಿ ಚಲಿಸುತ್ತಿವೆ ಎಂಬ ವಿಷಯವನ್ನು ಎಸ್.ಎಂ.ಎಸ್. ಮುಖಾಂತರ ಸ್ಥಳೀಯ ಜನರಿಗೆ ಆಗಿಂದಾಗ್ಗೆ ಮಾಹಿತಿ ನೀಡಲಾಗುತ್ತಿದೆ. • ತೀವ್ರ ತರನಾದ ಉಪಟಳ ನೀಡುತ್ತಿರುವ ವನ್ಯಪ್ರಾಣಿಗಳನ್ನು ಸೆರೆಹಿಡಿದು ಆಗಿಂದಾಗ್ಗೆ ಸೂಕ್ತ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ. • ರೈತರಿಗೆ ಸೋಲಾರ್ ಬೇಲಿ ನಿರ್ಮಾಣಕ್ಕೆ ಶೇ. 50ರಷ್ಟು ಧನ ಸಹಾಯವನ್ನು ಇಲಾಖೆಯಿಂದ ನೀಡಲಾಗುತ್ತಿದೆ.
ಉ)	ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರಿಗೆ ಸರ್ಕಾರ ನೀಡುವ ಪರಿಹಾರ ಎಷ್ಟು; ಇಲ್ಲಿಯವರೆಗೆ ಎಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು).	ವನ್ಯಪ್ರಾಣಿ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 03.08.2011 ರನ್ವಯ ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ರೂ. 5,00,000/- ಗಳ (ಐದು ಲಕ್ಷ ರೂಪಾಯಿಗಳು ಮಾತ್ರ) ದಯಾತ್ಮಕ ಧನವನ್ನು ಪಾವತಿಸಲಾಗುತ್ತಿತ್ತು. ಇದೀಗ ಸರ್ಕಾರದ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ: 07.01.2020 ರನ್ವಯ ದಯಾತ್ಮಕ ಧನದ ಮೊತ್ತವನ್ನು ರೂ.7,50,000/- ಗಳಿಗೆ (ಏಳೂವರೆ ಲಕ್ಷ ರೂಪಾಯಿಗಳು ಮಾತ್ರ) ಹೆಚ್ಚಿಸಲಾಗಿದ್ದು, ಅದರಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ. ಅಲ್ಲದೆ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 61 ಎಫ್‌ಎಪಿ 2018, ದಿನಾಂಕ: 16.10.2018 ರನ್ವಯ ವನ್ಯಜೀವಿ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ 05 ವರ್ಷಗಳವರೆಗೆ ರೂ. 2,000/-ಗಳ (ಎರಡು ಸಾವಿರ ರೂಪಾಯಿಗಳು ಮಾತ್ರ) ಮಾಸಾಶನವನ್ನು ಸಹ ನೀಡಲಾಗುತ್ತಿದೆ.

ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಳೆದ ಎರಡು ವರ್ಷಗಳಿಂದ ದಾಖಲಾದ ಪ್ರಕರಣಗಳು ಹಾಗೂ ಪಾವತಿಸಲಾದ ದಯಾತ್ಮಕ ಧನದ ವಿವರಗಳು ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ / ವಿಭಾಗ	2018-19		2019-20	
		ಪ್ರಕರಣ ಸಂಖ್ಯೆ	ಮೊತ್ತ	ಪ್ರಕರಣ ಸಂಖ್ಯೆ	ಮೊತ್ತ
1.	ರಾಮನಗರ	1	5.00	2	10.00
2.	ಬೆಂಗಳೂರು ಗ್ರಾಮಾಂತರ	-	-	1	5.00
3.	ಕೋಲಾರ	1	5.00	2	15.00
4.	ಬೆಳಗಾವಿ	1	5.00	-	-
5.	ಬಾಗಲಕೋಟೆ	1	5.00	1	5.00
6.	ಬಿಜಾಪುರ	1	5.00	-	-
7.	ಬಳ್ಳಾರಿ	3	15.00	1	5.00
8.	ಚಿತ್ರದುರ್ಗ	-	-	1	5.00
9.	ಬಿ.ಆರ್.ಟಿ	3	15.00	1	5.00
10.	ಕಾವೇರಿ	1	5.00	1	5.00
11.	ಮಲೈಮಹದೇಶ್ವರ	1	5.00	4	20.00
12.	ಚಿಕ್ಕಮಗಳೂರು	2	10.00	3	15.00
13.	ಕೊಪ್ಪ	1	5.00	1	5.00
14.	ಬಂಡೀಪುರ	1	5.00	5	27.50
15.	ನಾಗರಹೊಳೆ	4	20.00	-	-
16.	ಕಲಬುರಗಿ	1	5.00	1	5.00
17.	ಯಾದಗಿರಿ	-	-	1	5.00
18.	ಹಾಸನ	1	5.00	3	5.00
19.	ತುಮಕೂರು	1	5.00	4	25.00
20.	ಮಡಿಕೇರಿ	-	-	1	5.00
21.	ಮಡಿಕೇರಿ ವನ್ಯಜೀವಿ	-	-	1	5.00
22.	ಕುಂದಾಪುರ	1	5.00	1	5.00
23.	ಮಂಡ್ಯ	1	5.00	-	-
24.	ಮೈಸೂರು	-	-	1	5.00
	ಒಟ್ಟು	26	130.00	36	182.50

ಸಂಖ್ಯೆ: ಅಪಜೀ 33 ಎಫ್ ಡಬ್ಲ್ಯೂ ಎಲ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು